Tumbe Group of International Journal
A Peer Reviewed Multidisciplinary Journal
ISSN: 2581-8511
Volume- 3
Issue-1
January-April: 2020

# ಗೌರಿಪುರ : ಸಾಂಸ್ಕೃತಿಕ ಅಧ್ಯಯನ.

**ಲಕ್ಷ್ಮೀಕಾಂತ**
ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿ
ಜಾನಪದ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ -583276.
ಮೊ.ಸಂ.9900389923, Emai-llakshmikantha960@gmail.com

## ಪ್ರಸ್ತಾವನೆ.

'ಗೌರಿಪುರ' ಗ್ರಾಮವು ತುಮಕೂರು ತಾಲ್ಲೂಕು ಸ್ಥಳದಿಂದ ಆಗ್ನೇಯ ದಿಕ್ಕಿಗೆ 13 ಕಿ.ಮೀ ದೂರದಲ್ಲಿದೆ. ಕಂದಾಯ ಗ್ರಾಮವಾಗಿರುವ ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ 69.82 ಹೆಕ್ಟೇರ್ಸ್. ಇದು 250 ವರ್ಷಗಳಿಗು ಪ್ರಾಚೀನವಾದ ಇತಿಹಾಸವನ್ನು ಹೊಂದಿದೆ. ಸ್ಥಳ ಪುರಾಣದ ಪ್ರಕಾರ ಈ ಸ್ಥಳವು 'ಗೌತಮ' ಎಂಬ ಋಷಿಯು ತಪಸ್ಸು ಮಾಡುತ್ತಿದ್ದ ಸ್ಥಳವಾಗಿದ್ದು, ಅವರ ಹೆಸರಿನಲ್ಲೆ ಇರುವ 'ಗೌತಮಾರನಹಳ್ಳಿ' ಗ್ರಾಮವು ಈ ಗ್ರಾಮಕ್ಕೆ ಹೊಂದಿಕೊಂಡಿದೆ.

'ಹಳೇಪಾಳ್ಯ' ಎಂಬುದು ಈ ಗ್ರಾಮದ ಪ್ರಾಚೀನ ಹೆಸರಾಗಿದೆ. ಈಗ ಇರುವ ಗ್ರಾಮವು ಬಹಳ ವರ್ಷಗಳ ಹಿಂದೆ ಜೋಗಿಕಟ್ಟೆ ಎಂಬ ಕೆರೆಯ ಕೋಡಿಯ ನೀರು ಹರಿದು ಹೋಗುವ ತೊರೆಯ ದಡದಲ್ಲಿತ್ತು. ಈ ತೋರೆಯ ನೀರಿನ ರಭಸಕ್ಕೆ ಪ್ರತಿ ವರ್ಷ ಮನೆಗಳು ಕೊಚ್ಚಿ ಹೋಗುತ್ತಿದ್ದ ಕಾರಣವಾಗಿ ಗ್ರಾಮಸ್ಥರು ಈ ಸ್ಥಳವನ್ನು ತೊರೆದು ಎತ್ತರದ ಪ್ರದೇಶವಾದ ಈಗಿನ ಸ್ಥಳದಲ್ಲಿ ಬಂದು ನೆಲೆಸಿದರು. ಪ್ರಾರಂಭದಲ್ಲಿ ಐದು ಕುಟುಂಬಗಳು ಇಲ್ಲಿಗೆ ಬಂದು ನೆಲೆಸಿದವು. ನಂತರದ ದಿನಗಳಲ್ಲಿ ಬೇರೆ ಬೇರೆ ಕುಟುಂಬಗಳು ಹೊರಗಿನಿಂದ ಇಲ್ಲಿಗೆ ಬಂದು ನೆಲೆಸುತ್ತ ಗ್ರಾಮ ವಿಸ್ತರಣೆಯಾಗಿದೆ. ಉಳಿದ ಕುಟುಂಬಗಳು ಈಗಿನ 'ಗೌತಮಾರನಹಳ್ಳಿ' ಗ್ರಾಮವಿರುವ ಸ್ಥಳದಲ್ಲಿ ನೆಲೆಸಿ ಗ್ರಾಮ ನಿರ್ಮಿಸಿಕೊಳ್ಳಲಾಯಿತು. ಈ ರೀತಿ ರೂಪುಗೊಂಡ ಹಳ್ಳಿಗೆ 'ಗೌರಮ್ಮ' ಎಂಬುವವರು ಗ್ರಾಮಕ್ಕೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಲ್ಲದೆ, ದೇವಾಲಯದ ನಿರ್ಮಾಣಕ್ಕು ಸಹಾಯ ಮಾಡಿದ ಕಾರಣವಾಗಿ ಅವರ ಗೌರವಾರ್ಥವಾಗಿ ಗ್ರಾಮಕ್ಕೆ 'ಗೌರಿಪುರ' ಎಂಬ ಹೆಸರನ್ನೆ ಇಡಲಾಗಿದೆ.

ಭೌಗೋಳಿಕವಾಗಿ ಗ್ರಾಮವು ಬಯಲುನಾಡಿನ ಪ್ರದೇಶವಾಗಿದೆ. ಗ್ರಾಮದಲ್ಲಿ ಒಕ್ಕಲಿಗ, ತಿಗಳ, ಮಡಿವಾಳ, ಆಚಾರ್ರು, ಬೆಸ್ತ ಹಾಗೂ ಹೊಲೆಯ ಸಮುದಾಯಗಳಿವೆ. ಇವುಗಳಲ್ಲಿ ಒಕ್ಕಲಿಗ ಹಾಗೂ ತಿಗಳ ಸಮುದಾಯಗಳು ದೊಡ್ಡ ಸಮುದಾಯಗಳಾಗಿವೆ. ಆಚಾರ್ರು ಜನಾಂಗ ಸಣ್ಣ ಸಮುದಾಯವಾಗಿದೆ. ಹಳ್ಳಿಯ ಪಾರಂಪರಿಕವಾದ ಹಿಡಿತ ಒಕ್ಕಲಿಗ ಸಮುದಾಯದವರಲ್ಲಿದೆ.

ಗ್ರಾಮದಲ್ಲಿ 125 ಮನೆಗಳಿವೆ. ಒಟ್ಟು ಜನಸಂಖ್ಯೆ 658 ಆಗಿದ್ದು, ಗಂಡು-338, ಹೆಣ್ಣು-320 ಆಗಿರುತ್ತದೆ. ಗ್ರಾಮದ ಮುಖ್ಯ ಕಸುಬು ವ್ಯವಸಾಯವಾಗಿದೆ. ಇದರ ಜೊತೆಗೆ ಹೈನುಗಾರಿಕೆ, ಮೇಕೆ, ಕುರಿ ಸಾಕಾಣಿಕೆ, ತೋಟಗಾರಿಕೆ, ಗಾರೆ ಕೆಲಸ, ಅಡಿಕೆ ಛೇಣಿ ಮೊದಲಾದ ಕಸುಬುಗಳನ್ನು ಅವಲಂಬಿಸಿದ್ದಾರೆ. ಇದರ ಜೊತೆಗೆ ಸ್ತ್ರೀಯರು ಸ್ತ್ರೀ ಶಕ್ತಿ ಸಂಘ, ಶ್ರೀ ಕ್ಷೇತ್ರ ಧರ್ಮಸ್ಥಳ ಕ್ಷೇಮಾಭಿವೃದ್ಧಿ ಸಂಘ, ಕಳಂಜಿಯಂ ಸಂಘ ಮೊದಲಾದ ಹಣಕಾಸು ಸಂಘ ಸಂಸ್ಥೆಗಳೊಂದಿಗೆ ವ್ಯವಹರಿಸುತ್ತಿದ್ದು, ಆರ್ಥಿಕ ಉಳಿತಾಯ ಮುಂತಾದ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಗ್ರಾಮದಲ್ಲಿನ ಸಾಮಾಜಿಕ ಜೀವನ ಮತ್ತು ಸಮುದಾಯಗಳಲ್ಲಿನ ಒಡನಾಟಗಳನ್ನು ಗಮನಿಸಿದರೆ, ಹಲವು ಜನಾಂಗಗಳಿದ್ದರು ಸೌಹಾರ್ಧಯುತವಾಗಿ ಬದುಕನ್ನು ಸಾಗಿಸುತ್ತಿರುವುದು ಕಂಡುಬರುತ್ತದೆ. ಹುಟ್ಟು, ಮದುವೆ, ಸಾವು ಮೊದಲಾದ ಯಾವುದೇ ಕೆಲಸಗಳಾಗಲಿ ಎಲ್ಲರು ಒಟ್ಟಿಗೆ ಸೇರಿ ತಮ್ಮ ಕೈಲಾದ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ.

ಗ್ರಾಮದಲ್ಲಿನ ಪ್ರತಿಯೊಂದು ಕೆಲಸ ಕಾರ್ಯಗಳು ಸಾಂಪ್ರದಾಯಿಕ ರೀತಿ ನೀತಿಯಂತೆ ನಡೆಯುತ್ತವೆ. ಜನನದ ಸಂದರ್ಭದಲ್ಲಿ ಮಗು ಹುಟ್ಟಿದ ತಕ್ಷಣ ಅದನ್ನು ಮೊರ (ಬಿದಿರಿನದು)ದಲ್ಲಿ ಮಲಗಿಸಿ ಮುತ್ತೈದೆಯರು ಹರಸುವುದು ಎಲ್ಲ ಸಮುದಾಯದವರಲ್ಲಿಯೂ ಕಂಡುಬರುತ್ತದೆ. ನಂತರ ತೊಟ್ಟಿಲಿಗೆ ಹಾಕುವ ಮುನ್ನ ಒಂದು ಗುಂಡು ಕಲ್ಲನ್ನು ಮೊದಲು ತೊಟ್ಟಿಲೊಳಗೆ ಇಟ್ಟು ತೂಗಿ ಅದನ್ನು ತೆಗೆದ ನಂತರ ಮಗುವನ್ನು ಅದರಲ್ಲಿ ಮಲಗಿಸುತ್ತಾರೆ. ಇದಕ್ಕೆ ಕಾರಣ ತೊಟ್ಟಿಲಲ್ಲಿ ದುಷ್ಟ ಶಕ್ತಿಗಳೇನಾದರೂ ಇದ್ದರೆ ಅವುಗಳಿಂದ ಮಗುವನ್ನು ರಕ್ಷಿಸುದೇ ಆಗಿದೆ. ನಂತರ ಸಂಪ್ರದಾಯದಂತೆ ಮಗುವಿಗೆ ಒಂಭತ್ತು ತಿಂಗಳಾದ ಮೇಲೆ ನಾಮಕರಣ ಶಾಸ್ತ್ರಗಳನ್ನು ನೆರವೇರಿಸುತ್ತಾರೆ.

ಹೆಣ್ಣು ಮಕ್ಕಳು ಋತುಮತಿಯಾದಾಗಿನ ಆಚರಣೆಗಳು ವಿಶೇಷವಾಗಿವೆ. ಒಕ್ಕಲಿಗ ಸಮುದಾಯದಲ್ಲಾದರೆ ಸೋದರ ಮಾವ ಹತ್ತಿಯ ಕೊಂಬೆಯನ್ನು ತಂದು 'ಗುಡ್ಲ' ನ್ನು ಹಾಕುತ್ತಾನೆ. ಗ್ರಾಮದ ಮುತ್ತೈದೆಯರಿಂದ ಸ್ನಾನಾದಿಗಳನ್ನು ಮಾಡಿಸಿದ ನಂತರ ಆಕೆಯನ್ನು ಅದರಲ್ಲಿ ಕೂರಿಸಿ ಒಸಗೆ ಹಾಕುವ ಕ್ರಮಗಳಿವೆ. ಮೊದಲೆಲ್ಲಾ ಏಳು ಅಥವಾ ಒಂಭತ್ತು ದಿನಗಳವರೆಗೆ ಈ 'ಗುಡ್ಲಿ' ನಲ್ಲಿದ್ದರೆ ಇಂದು ಶಾಸ್ತ್ರಕ್ಕೆಂದು ಒಂದು ದಿನ ಅದರಲ್ಲಿ ಬಿಡುವ ಕ್ರಮವೂ ಇದೆ. ಹೀಗೆ 'ಗುಡ್ಲಿ' ಗೆ ಬಿಟ್ಟ ನಂತರ ಸಂಪ್ರದಾಯದಂತೆ 'ನಡುಮನೆ ಒಸಗೆ' ಮೊದಲಾದ ಕಾರ್ಯಕ್ರಮಗಳು ಜರುಗಿ ಕೊನೆಯ ದಿನ 'ದೊಡ್ಡ ಒಸಗೆ' ಕಾರ್ಯಕ್ರಮವಿರುತ್ತದೆ. ಅಂದು ಬಂಧು ಬಳಗ, ಊರಿನವರಿಗೆಲ್ಲ ಭರ್ಜರಿ ಅಡುಗೆ ಊಟದ ವ್ಯವಸ್ಥೆ ಇರುತ್ತದೆ. ಈ ನಡುವೆ ಬೆಲ್ಲ, ಕೊಬ್ಬರಿ ಮೊದಲಾದ ಆಹಾರಗಳನ್ನು ಆಕೆಗೆ ನೀಡಲಾಗುತ್ತದೆ.

ತಿಗಳ ಸಮುದಾಯದವರಲ್ಲಿಯೂ ಇದೇ ರೀತಿಯ ಆಚರಣೆಗಳು ರೂಢಿಯಲ್ಲಿದ್ದಾಗ್ಯೂ ಕೂಡ ಹೆಣ್ಣು ಮಗಳಿಗೆ ಗುಡ್ಲು ಹಾಕಲು ಕುಲಸ್ಥರು ಮತ್ತು ಕಟ್ಟೆ ಮನೆಯ ಅನುಮತಿ ಅಗತ್ಯ. ಅನುಮತಿ ಸಿಗುವವರೆಗು ಆಕೆಗೆ ಒಸಗೆ ಮೊದಲಾದ ಯಾವುದೇ ಕಾರ್ಯಕ್ರಮಗಳನ್ನು ನಡೆಸುವಂತಿಲ್ಲ.

ಗ್ರಾಮದ ಯಾವುದೇ ಮನೆಯಲ್ಲಿ ಮದುವೆ ನಿಶ್ಚಯವಾದರೂ ಕೂಡ ಹದಿನೈದು ಇಪ್ಪತ್ತು ದಿನಗಳಿಗೆ ಮೊದಲೇ ಮದುವೆಯವರ ಮನೆಯಲ್ಲಿ ಅಕ್ಕಿ ಮಾಡುವ, ಒಸಗೆ ಸಾಮಾನು ಮಾಡುವ, ಪಾತ್ರೆ-ಪಗಡ ಹೊಂದಿಸುವ, ಸೌದೆ ಒಡೆಯುವ ಮೊದಲಾದ ಕೆಲಸಗಳಲ್ಲಿ ತೊಡಗುತ್ತಾರೆ. ಇವೆಲ್ಲಕ್ಕು ಮದುವೆ ಮನೆಯವರು ಹಿಂದಿನ ದಿನವೇ ಎಲೆ, ಅಡಿಕೆ ನೀಡಿ ಮನೆಯ ಕೆಲಸಗಳಲ್ಲಿ ಪಾಲ್ಗೊಳ್ಳಬೇಕೆಂದು ಆಹ್ವಾನಿಸಿರುತ್ತಾರೆ. ಇದೇ ರೀತಿ ಮದುವೆಯ ದಿನವೂ ಕೂಡ ಚಪ್ಪರ ಹಾಕುವ, ಮದುವೆ ಮಂಟಪ ಸಿದ್ದಪಡಿಸುವ, ಅಡುಗೆ ಕೆಲಸ, ಬಂದ ನೆಂಟರಿಷ್ಟರನ್ನು ಸ್ವಾಗತಿಸುವ ಹೀಗೆ ಎಲ್ಲ ಸಂದರ್ಭಗಳಲ್ಲು ಕೂಡ ತಮ್ಮದೇ ಮಿತಿಗಳಲ್ಲಿ (ತಿಗಳ ಸಮುದಾಯದವರ ಮದುವೆಗಳಲ್ಲಿ ಈ ರೀತಿಯ ಅವಕಾಶಗಳಿಲ್ಲ) ಎಲ್ಲರೂ ಪಾಲ್ಗೊಳ್ಳುವುದು ಕಂಡುಬರುತ್ತದೆ. ಆದರೆ ಇಂದು ಆಧುನಿಕ ಕಲ್ಯಾಣ ಮಂಟಪಗಳ ಅಬ್ಬರದಲ್ಲಿ ಇವು ಕಣ್ಮರೆಯಾಗುತ್ತಿದ್ದರೂ, ಅಪರೂಪಕ್ಕೊಮ್ಮೆ ಹಳ್ಳಿಗಳಲ್ಲಿ ಮನೆಯ ಮುಂದೆ ಮದುವೆಗಳು ನಡೆದಾಗ ಮತ್ತೆ ಹಿಂದಿನ ಸಂತಸದ ಕ್ಷಣಗಳನ್ನು ನೆನೆದು ಗಂಟೆಗಟ್ಟಲೆ ಹರಟುವುದನ್ನು ಕಾಣಬಹುದು.

ಇದೇ ರೀತಿ ಹಳ್ಳಿಯಲ್ಲಿ ಯಾವುದೇ ಮನೆಯಲ್ಲಿ ಸಾವು ನೋವುಗಳು ಸಂಭವಿಸಿದರೂ ಆ ಮನೆಯವರನ್ನು ಬಿಟ್ಟು, ಉಳಿದ ಕೋಮಿನ ವ್ಯಕ್ತಿಗಳು ಶವ ಸಂಸ್ಕಾರಕ್ಕೆ ಅಗತ್ಯವಾದ ಶವದ ಮನೆಯನ್ನು ನಿರ್ಮಿಸಿಕೊಡುವ, ಆ

ಮನೆಯವರಿಗೆ ಅಡುಗೆ ಮಾಡಿಕೊಡುವ ಹಾಗೂ ಅವರ ದುಃಖದಲ್ಲಿ ಭಾಗಿಯಾಗುವ ಬಾಂಧವ್ಯ ಇಂದಿಗೂ ಉಳಿದುಕೊಂಡು ಬಂದಿದೆ.

ಸಂಸ್ಕಾರದ ಆಚರಣೆಗಳನ್ನು ಗಮನಿಸಿದರೆ ಶವವನ್ನು ಉತ್ತರ-ದಕ್ಷಿಣಾಭಿಮುಖವಾಗಿ ಮಲಗಿಸಿ ಮಣ್ಣು ಮಾಡಲಾಗುತ್ತದೆ. ನಂತರ ಮೂರು ದಿನಕ್ಕೆ ಹಾಲು ತುಪ್ಪ ಬಿಡುವ ಆಚರಣೆ ನಡೆಯುತ್ತದೆ. ಹನ್ನೊಂದು ದಿನಗಳ ನಂತರ ತಿಥಿ ಕಾರ್ಯವಿದ್ದು, ಒಕ್ಕಲಿಗ ಸಮುದಾಯವಾದರೆ ಸಿಹಿ ಊಟವನ್ನು ಮಾಡುತ್ತಾರೆ. ತಿಗಳ ಹಾಗೂ ಬೆಸ್ತ ಸಮುದಾಯವರು ಮಾಂಸಾಹಾರವನ್ನು ಮಾಡುತ್ತಾರೆ. ವಿಶೇಷವಾಗಿ ಬೆಸ್ತ ಸಮುದಾಯದವರು ತಿಥಿಯ ದಿನದಂದು ಗುಂಡಿ ಪೂಜೆಗೆ ಮಾಂಸದ ಸಾರನ್ನು ತೆಗೆದುಕೊಂಡು ರಾತ್ರಿ ಸು. ಹನ್ನೆರಡು ಗಂಟೆಗೆ (ಈಗ ಬದಲಾಗಿದೆ) ಹೋಗಿ ಬರುತ್ತಿದ್ದುದಾಗಿ ಹೇಳುತ್ತಾರೆ.

ಪ್ರಮುಖವಾಗಿ ಗಮನಿಸುವಂತಹ ಅಂಶವೆಂದರೆ ಗ್ರಾಮಕ್ಕೆ ಸೇರಿದಂತೆ ಯಾವುದೇ ರೀತಿಯ ಸ್ಮಶಾನ ಭೂಮಿ ಇಲ್ಲದಿದ್ದರೂ ಖಾಸಗಿಯವರಿಗೆ ಸೇರಿರುವ 'ಭಂಗಿ ಸಿದ್ದನ ಹಡ್ಲು' ಎಂಬಲ್ಲಿ ಈ ಗ್ರಾಮದವರು ಯಾವುದೆ ಜಾತಿ ಬೇಧಗಳಿಲ್ಲದೆ ಮರಣ ಹೊಂದಿದವರ ಕಳೆಬರಹವನ್ನು ಬಹು ಹಿಂದಿನಿಂದಲು ಮಣ್ಣು ಮಾಡುತ್ತಿರುವುದು ಸಹ ಬಾಳ್ವೆಯ ಸಂಕೇತವಾಗಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು, ಇಬ್ಬರು ಶಿಕ್ಷಕರಿದ್ದಾರೆ. ಒಟ್ಟು 24 ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಇಲ್ಲಿನ ಬಹುಪಾಲು ವಿದ್ಯಾರ್ಥಿಗಳು ಹೆಣ್ಣು ಮಕ್ಕಳಿದ್ದು, ಈ ಗ್ರಾಮದ ಪೋಷಕರು ಗ್ರಾಮದ ಪಕ್ಕದಲ್ಲಿರುವ ಇಂಗ್ಲಿಷ್ ಮಾಧ್ಯಮ (ಕಾನ್ವೆಂಟ್‌ಗಳಿಗೆ) ಶಾಲೆಗೆ ತಮ್ಮ ಗಂಡು ಮಕ್ಕಳನ್ನು ಕಳುಹಿಸುತ್ತಿದ್ದಾರೆ. ಇದೊಂದು ಬಗೆಯ ತಾರತಮ್ಯ, ಶೋಷಣೆ ಎನಿಸಿದರೂ ಸಹ ಈ ಗ್ರಾಮದ ಸರ್ಕಾರಿ ಶಾಲೆಯು ಉಳಿದಿರುವುದೇ ಈ ಹೆಣ್ಣು ಮಕ್ಕಳಿಂದ ಎಂಬುದು ವಿಪರ್ಯಾಸವಾದರೂ ಕಟು ಸತ್ಯ.

ಇಲ್ಲಿನ ಜನರು ದೇವರಾಯನದುರ್ಗದ ಲಕ್ಷ್ಮೀ ನರಸಿಂಹಸ್ವಾಮಿ, ಶೆಟ್ಟಿಹಳ್ಳಿಯ ಆಂಜನೇಯ ಸ್ವಾಮಿ, ತಿರುಪತಿಯ ವೆಂಕಟರಮಣ ಸ್ವಾಮಿಯ ಭಕ್ತರಾಗಿದ್ದು, ಪ್ರತಿ ವರ್ಷ ಆ ದೈವಗಳಿಗೆ ನಡೆದುಕೊಳ್ಳುವರು. ನರಸಿಂಹಸ್ವಾಮಿ ಮತ್ತು ಆಂಜನೇಯ ಸ್ವಾಮಿ ಜಾತ್ರೆಗಳಂದು ತಮ್ಮ ಮನೆಗಳಲ್ಲಿ 'ಹರಿಸೇವೆ' ಮಾಡಿ ನಂತರ ಬೆಳಿಗ್ಗೆ ತೇರಿಗೆ ಹೋಗುವರು.

ಹರಿಸೇವೆಯ ದಿನ ಮನೆಗಳಲ್ಲಿ 'ಆರತಿ' ಮಾಡಿ, ಹಲಸಿನ ಹಣ್ಣಿನ 'ರಸಾಯನ' ಮಾಡಿಕೊಂಡು, ಮನೆಗಳಲ್ಲಿ ಮಾಡಿದ ಆರತಿಗಳೊಂದಿಗೆ ದಾಸಪ್ಪನ ಜೊತೆ ಊರಿನ ಗ್ರಾಮ ದೇವತೆಯಾದ ಕಾಳಘಟ್ಟಮ್ಮನವರ ದೇವಾಲಯದ ಬಳಿ ಬಂದು ಪೂಜೆ ಸಲ್ಲಿಸಿ ಅಲ್ಲಿಂದ ಕಣಕ್ಕೆ ಬರಲಾಗುತ್ತದೆ. ಇಲ್ಲಿ ಆರತಿಗಳನ್ನು ಸಾಲಾಗಿ ಇಟ್ಟು, 'ಧೂಪದ ಸೇವೆ' ನಡೆಸಲಾಗುತ್ತದೆ. ಇಲ್ಲಿನ ಪ್ರಮುಖ ಆಕರ್ಷಣೆ ದಾಸಪ್ಪನ ಜೊತೆಗಿನ 'ಪರೇವು' (ಮಣೇವು) ಆಡಿಸುವ ಕಾರ್ಯಕ್ರಮ. ಕಣದ ಮಧ್ಯಭಾಗದಲ್ಲಿ ದೊಡ್ಡದೊಂದು ಬಿಳಿ ಪಂಚೆಯನ್ನು ಹಾಸಿ ಅದರ ಎರಡು ತುದಿಗಳಲ್ಲಿ ಮೊದಲು ರಸಾಯನವನ್ನು ಇಟ್ಟು ನಂತರ ಮಧ್ಯಭಾಗದಲ್ಲಿ ಹಲವು ಕಡೆ ಇಟ್ಟು, ನಂತರ ದಾಸಪ್ಪ ಮಕ್ಕಳು, ಮರಿಗಳೆನ್ನದೆ ಎಲ್ಲರ ಜೊತೆ ಆರತಿಗಳನ್ನು ಮೂರು ಸುತ್ತು ಪ್ರದಕ್ಷಿಣೆ ಹಾಕುತ್ತ, ಕಕ್ಕೆ ಸೊಪ್ಪಿನಿಂದ ಬಾರಿಸುತ್ತ, 'ಹೋಲ್ಯ' , 'ಹೋಲ್ಯ' , 'ಹೋಲಿ ಪರಾಕು' ಎಂದು ಕೂಗುತ್ತ ಕೊನೆಗೆ 'ಹ್ಞೂ' ಎಂದಾಗ ಎಲ್ಲರೂ ಓಡಿ ಬಂದು ಬಾಯಿ ಹಾಕಿ ರಸಾಯನವನ್ನು ತಿನ್ನುವರು. ಹೀಗೆ ಮೂರು ಅಥವಾ ಒಂಭತ್ತು ಸಲ ನಡೆಯುವುದು. ನಂತರ ತಮದ ಹಣ್ಣು ಕಾಯಿ, ಕರ್ಪೂರ, ಸಾಬ್ರಾಣಿಗಳಿಂದ ತಮ್ಮ ಮನೆ ದೇವರನ್ನು ಪೂಜಿಸಿ ಮನೆಗೆ ವಾಪಸ್ಸಾಗುತ್ತಾರೆ. ಹೀಗೆ ಬರುವಾಗ ಉಳಿದ ರಸಾಯನವನ್ನು ಎಲ್ಲರಿಗೂ ಹಂಚುತ್ತಾರೆ. ಉಳಿದ ಕೋಮಿನ ಜನರನ್ನು ಅಂದು ಮನೆಗೆ ಕರೆದು ಊಟಕ್ಕೆ ನೀಡುವ ಸಂಪ್ರದಾಯ ಇಂದಿಗೂ ಉಳಿದಿದ್ದು, ಮುಂದುವರೆದುಕೊಂಡು ಬಂದಿದೆ.

ಗ್ರಾಮದಲ್ಲಿ 'ಯುಗಾದಿ' ಹಬ್ಬವನ್ನು ಸಡಗರದಿಂದ ಆಚರಿಸಲಾಗುತ್ತದೆ. ಅದು ಹೊಸ ವರ್ಷದ ಸ್ವಾಗತವೂ ಆಗಿದೆ. ಅಂದು ಮುಂಜಾನೆಯೆ ಎದ್ದು ಎಣ್ಣೆ ಸ್ನಾನಾದಿಗಳಾದ ನಂತರ ಮನೆಯಲ್ಲಿ ಪೂಜೆ ಮುಗಿಸಿ ಗ್ರಾಮ ದೇವತೆಯ ದೇವಾಲಯದಲ್ಲಿ 'ಬೇವು ಬೆಲ್ಲ ತಿದ್ದಿಸಿಕೊಂಡು' ಬರಲು ಹೊರಡುವರು. ತಟ್ಟೆಯಲ್ಲಿ ಪೂಜಾ ಸಾಮಗ್ರಿಗಳನ್ನು ಇಟ್ಟುಕೊಂಡು ಜೊತೆಗೆ ಕಡಲೆಪುರಿಯನ್ನು ತೆಗೆದುಕೊಂಡು ಅದಕ್ಕೆ ಕಡಲೆ, ಬೆಲ್ಲ, ಬೇವಿನ ಎಲೆ, ಬೇವಿನ ಹೂ ಮೊದಲಾದವುಗಳನ್ನು ಬೆರಸಿಕೊಂಡು ಹೋಗಿ ದೇವಾಲಯದಲ್ಲಿ ಪೂಜೆ ಮಾಡಿಸಿಕೊಂಡ ನಂತರ ಎಲ್ಲರಿಗೂ ಅದನ್ನು ಹಂಚಿ ತಿನ್ನುವರು.

ಗ್ರಾಮದಲ್ಲಿ ಶ್ರೀ ಆದಿಶಕ್ತಿ ಕಾಳಘಟ್ಟಮ್ಮನವರ ದೇವಾಲಯವಿದೆ. ಮೂಲದಲ್ಲಿ ಈ ದೈವವನ್ನು 'ಕುನ್ನಾಲ' ಎಂಬ ಸ್ಥಳದಿಂದ ತಂದು ಈ ಹಳ್ಳಿಯಲ್ಲಿ ಪ್ರತಿಷ್ಠಾಪಿಸಿರುವುದು ತಿಳಿದುಬರುತ್ತದೆ. ಪ್ರತಿ ವರ್ಷ ಶೆಟ್ಟಿಹಳ್ಳಿಯ ಆಂಜನೇಯ ಸ್ವಾಮಿ ಹಾಗೂ ಗೌತಮಾರನಹಳ್ಳಿಯ ಬಸವಣ್ಣನ ಜಾತ್ರೆಗಳು ಜರುಗಿದ ನಂತರ ಏಪ್ರಿಲ್-ಮೇ ತಿಂಗಳಿನಲ್ಲಿ ಅದರಲ್ಲು ಯುಗಾದಿ ಹಬ್ಬದ ತರುವಾಯ ವಿಜೃಂಭಣೆಯಿಂದ ಜಾತ್ರಾ ಮಹೋತ್ಸವ ಜರುಗುತ್ತದೆ. ಹಿಂದೆ ಪ್ರತಿ ವರ್ಷ ರಥೋತ್ಸವ ಜರುಗುತ್ತಿದ್ದು, ಈಗ ಅದು ನಿಂತು ಹೋಗಿದೆ. ದೇವಾಲಯದ ಮುಂದೆ ಇರುವ ತೇರಿನ ಸಾಮಾನುಗಳು ಹಾಗೂ ರಥದ ಚಕ್ರಗಳು ಇದಕ್ಕೆ ಮೂಕ ಸಾಕ್ಷಿಯಾಗಿವೆ.

ಪ್ರತಿ ವರ್ಷ ಜಾತ್ರೆಗೆ 'ಸಾರಿಕ್ಕುವ' (ಜಾತ್ರೆಯ ದಿನಾಂಕವನ್ನು ನಿಗದಿಗೊಳಿಸುವುದು) ಮೂಲಕ ಚಾಲನೆ ನೀಡಲಾಗುತ್ತದೆ. ಇಪ್ಪತ್ತು ದಿನ ಅಥವಾ ಒಂದು ತಿಂಗಳಿಗೆ ಮೊದಲೆ ಗ್ರಾಮದ ಎಲ್ಲ ಕೋಮಿನ ಯಜಮಾನರು ಹಾಗೂ ಗ್ರಾಮಸ್ಥರು ಒಂದೆಡೆ ಸೇರಿ ಜಾತ್ರಾ ದಿನಾಂಕವನ್ನು ನಿಗದಿಪಡಿಸುತ್ತಾರೆ. ಯಾವುದೇ ಕಾರಣಕ್ಕೂ ಈ ದಿನಾಂಕವನ್ನು ಬದಲಾಯಿಸುವುದಿಲ್ಲ. ಒಂದು ವೇಳೆ ಗ್ರಾಮದಲ್ಲಿ 'ಕಳಸ' ಮತ್ತು 'ಘಟ್ಟೆ ಗಡಿಗೆ' ಹೊರಡುವ ಯಜಮಾನ್ ದಿ.ಕೆಂಪಯ್ಯನವರ ಮನೆಯಲ್ಲಿ ಇಲ್ಲವೆ ಅವರ ಅಣ್ಣ ತಮ್ಮಂದಿರ ಮನೆಗಳಲ್ಲಿ ಯಾವುದಾದರೂ ಸೂತಕಗಳು ಸಂಭವಿಸಿದರೆ ಮಾತ್ರ ದಿನಾಂಕವನ್ನು ಮುಂದೂಡುತ್ತಾರೆ. ಇದರ ಹೊರತು ಇನ್ನಾವುದೇ ಸಂದರ್ಭದಲ್ಲಿ ಬದಲಾಯಿಸುವುದಿಲ್ಲ. ಹೀಗೆ ದಿನಾಂಕವನ್ನು ಗೊತ್ತುಪಡಿಸಿದ ನಂತರ 'ಊರ ಮುಂದಿನ ಹಣ' ವೆಂದು ಜಾಜ್ರಾ ಖರ್ಚಿಗೆ ಮನೆಗೆ ಇಂತಿಷ್ಟು ಎಂದು ಹಣವನ್ನು ನಿಗದಿಗೊಳಿಸಿ ತಮಟೆಯ ಮೂಲಕ ಊರ ತುಂಬ ಸಾರಲಾಗುತ್ತದೆ. ಇಲ್ಲಿಂದ ಅಧಿಕೃತವಾಗಿ ಜಾತ್ರಾ ತಯಾರಿಗಳು ಪ್ರಾರಂಭವಾಗುತ್ತವೆ. ಈ ನಡುವೆ ಊರಿನಲ್ಲಿ ಹರಳು(ಹಳ್ಳು) ಉರಿಯುವುದಾಗಲಿ, ಘಾಟು ಇಡುವುದಾಗಲಿ ನಿಷಿದ್ದ.

ಗ್ರಾಮದಲ್ಲಿ ಕಾಳಘಟ್ಟನವರ ಜಾತ್ರೆಯು ನಾಲ್ಕು ದಿನಗಳವರೆಗೆ ಜರುಗುತ್ತದೆ. ಮುಖ್ಯವಾಗಿ ಸೋಮವಾರ, ಮಂಗಳವಾರ, ಬುಧವಾರ ಹಾಗೂ ಗುರುವಾರಗಳಂದೆ ನಡೆಯುವುದು ವಾಡಿಕೆ.

**ಸೋಮವಾರದ ದಿನದ ಜಾತ್ರಾ ವಿಶೇಷತೆಗಳು.**

ಈ ದಿನವು ಜಾತ್ರೆಯ ಮೊದಲನೆ ದಿನವಾಗಿದ್ದು 'ಕರುಗಲ್ಲು' ಜರುಗುತ್ತದೆ. ಅಂದು ಬೇಗನೆ ಎದ್ದು ಅಂಗಳ ಸಾರಿಸಿ, ತೋರಣ ಕಟ್ಟಿ ಮನೆಯನ್ನು ಸಿಂಗರಿಸಲಾಗುತ್ತದೆ. ಜೊತೆಗೆ ಗ್ರಾಮದ ಮನೆಗೊಬ್ಬರಂತೆ ದೇವಾಲಯದ ಮುಂದೆ ಹಸಿರು ಚಪ್ಪರ, ಬಾಳೆ ಕಂದು ಕಟ್ಟುವುದು, ದೇವಾಲಯ ಸಿಂಗರಿಸುವ ಕೆಲಸಗಳಲ್ಲಿ ಪಾಲ್ಗೊಳ್ಳುತ್ತಾರೆ.

ಈ ದಿನದಂದು ಜಾತ್ರಾ ವಿಧಿ ವಿಧಾನಗಳು ಮಧ್ಯಾಹ್ನ ಹನ್ನೆರಡು ಗಂಟೆಯಿಂದ ಪ್ರಾರಂಭವಾಗುತ್ತವೆ. ಮೊದಲು ಅಮ್ಮನವರ ಉತ್ಸವ ಮೂರ್ತಿಯನ್ನು ಮೆರವಣಿಗೆ ದೇವಾಲಯದಿಂದ ಹೊರತಂದು ನೆಲೆ ದೇವರ ದೇವಾಲಯದಲ್ಲಿ ಪುಜೆ ಮಾಡಿಸಲಾಗುತ್ತದೆ. ನಂತರ ಅಲ್ಲಿಂದ ಮಹಾ ಮಂಗಳಾರತಿಗಾಗಿ ಕಳಸದವರ ಮನೆಯಾದ ಯಜಮಾನ್ ದಿ.ಕೆಂಪಯ್ಯನವರ ಮನೆಗೆ ಆಗಮಿಸಿ ಮಹಾ ಮಂಗಳಾರತಿಯನ್ನು ಪಡೆದು, ನಂತರ ನೇರವಾಗಿ 'ಕರುಗಲ್ಲು' ವಿನ ಬಳಿ ತಂದು ದೇವರನ್ನು ಕುಳ್ಳಿರಿಸಲಾಗುತ್ತದೆ. ಈ ದಿನದ ವಿಶೇಷತೆ 'ಕರುಗಲ್ಲಮ್ಮ' ನ ಪೂಜೆ. ಅಂದು ಇಲ್ಲಿ 'ಉಪಾರ' ಹುಯ್ಯಲಾಗುತ್ತದೆ. ಊರಿನ ಪ್ರತಿ ಮನೆಯವರು ಕೂಡ ಸ್ನಾನ ಮಡಿಗಳಿಂದ

'ಎಡೆ ಅನ್ನ' ವನ್ನು ಮಾಡಿ ಒಂದು ಬಟ್ಟಲಿಗೆ ಹಾಕಿಕೊಂಡು, ಅದಕ್ಕೆ ಮೊಸರು ಬಿಟ್ಟುಕೊಂಡು, ಅದರ ಸುತ್ತಲು ಬೇವಿನ ಸೊಪ್ಪು ಚುಚ್ಚಿಕೊಂಡು, ಬಿಳಿ ಕಣಗಿಲೆ ಹೂವುಗಳನ್ನು ಅಂಚಿ ಕಡ್ಡಿಗೆ ಏರಿಸಿ ಅದನ್ನು ಉಪಾರಕ್ಕೆ ಸಿಂಗರಿಸಿಕೊಂಡು, ಪೂಜಾ ಸಾಮಗ್ರಿಗಳೊಂದಿಗೆ ಕರುಗಲ್ಲುವಿನ ಬಳಿಗೆ ಬರಲಾಗುತ್ತದೆ. ಕೈವಾಡದವರು ಪ್ರತಿ ಬೀದಿಗಳಿಗೂ ಹೊಗಿ 'ಉಪಾರ' ಗಳನ್ನು ಹೊರಡಿಸಿಕೊಂಡು ಬರುತ್ತಾರೆ. ಇದರ ಜೊತೆಗೆ ಅಂದು ಗ್ರಾಮದ ಎಲ್ಲ ದನಗಳನ್ನು ಮಯ ತೊಳೆದು, ಬಣ್ಣ ಬಣ್ಣದ ವಸ್ತ್ರಗಳಿಂದ ಸಿಂಗರಿಸಿ ದೇವಾಲಯದ ಬಳಿ ಕರೆತರಲಾಗುತ್ತದೆ.

ಈ ರೀತಿ ಎಲ್ಲರು ಬಂದ ಮೇಲೆ ದೇವಾಲಯವನ್ನು ಮೂರು ಸುತ್ತು ಪ್ರದಕ್ಷಿಣೆ ಹಾಕಿಸಿ, ತಂದ ಉಪಾರಗಳನ್ನು ಕರುಗಲ್ಲಿನ ಮುಂದೆ ಬಾಳೆ ಎಲೆಯ ಮೇಲೆ ಸುರಿದು ಪೂಜೆ ಮಾಡಲಾಗುತ್ತದೆ. ಇಲ್ಲಿ ಮೊದಲ ಪೂಜೆ ದಿ.ಕೆಂಪಯ್ಯನವರ ಮನೆಯದಾಗಿರುತ್ತದೆ. (ಕಾರಣ ಊರಿಗೆ ಇದು ತಳಮನೆ ಹಾಗೂ ಯಜಮಾನರು) ನಂತರ ಆಯಾ ಕೋಮಿನ ಯಜಮಾನರ ಉಪಾರ, ಹಾಗೂ ಗ್ರಾಮದ ಉಪಾರಗಳ ಪೂಜೆ ನಡೆಯುತ್ತದೆ. ಪೂಜೆ ಮುಗಿದ ತರುವಾಯ 'ಕರುಗಲ್ಲು ಬುತ್ತಿ' ಯನ್ನು ಕಟ್ಟಲಾಗುತ್ತದೆ. ಅಂದರೆ ಸ್ವಲ್ಪ ಅನ್ನ ಅಥವಾ ಶಾವಿಗೆಯನ್ನು ಒಂದು ಸುಲಪಟೆ ಎಲೆಗೆ ಹಾಕಿ ಕಟ್ಟಿ ಕೈವಾಡದವರಲ್ಲೊಬ್ಬನನ್ನು ಕರೆದು ತಣ್ಣೀರಿನಿಂದ ಅಲ್ಲೆ ಮಡಿ ಮಾಡಿಸಿ ಆತನಿಗೆ ಅದನ್ನು ಕೊಡಲಾಗುತ್ತದೆ. ಮಡಿಯಲ್ಲಿಯೆ ಆತ ಯಾರಿಗೂ ತಿಳಿಯದ ಹಾಗೆ ಊರ ಹೊರಗೆ ಹೋಗಿ ಅದನ್ನು ತಿಂದು ಬರಬೇಕು. ಆಗ ಆತ ಜೋರಾಗಿ ಓಡುತ್ತಾನೆ. ಆತನ ಹಿಂದೆ ಊರಿನ ಎಲ್ಲ ದನಗಳನ್ನು ಓಡಿಸಿಕೊಂಡು ಹೋಗಲಾಗುತ್ತದೆ. ಈ ರೀತಿ ಹೋದ ಆತ ಯಾರಿಗೂ ತಿಳಿಯದಂತೆ ಅದನ್ನು ತಿಂದು ಬರುತ್ತಾನೆ. ನಂತರ ಉಳಿದಿರುವ ಉಪಾರವನ್ನು ಊರಾಚೆಗೆ ಬಿಡಲಾಗುತ್ತದೆ. ಪೂಜೆಯಾದ ಮೇಲೆ ದೇವರ ಮೂರ್ತಿಯನ್ನು ರಾತ್ರಿಯವರೆಗು ಊರಿನ ವ್ಯಕ್ತಿಗಳು ತಮ್ಮ ತಮ್ಮ ಮನೆಗಳಿಗೆ ಕರೆದುಕೊಂಡು ಹೋಗಿ ಕೂರಿಸಿಕೊಂಡು ಪೂಜೆ ಮಾಡಿಸಿ, ಹರಕೆ ನೀಡಿ, ಚರುಪು ಕೊಟ್ಟು ಕಳುಹಿಸುವ ಕ್ರಿಯೆಗಳು ನಡೆಯುತ್ತವೆ. ಇವು ಸೋಮವಾರದ ದಿನದ ಆಚರಣೆಗಳು.

**ಮಂಗಳವಾರದ ದಿನದ ಜಾತ್ರಾ ವಿಶೇಷತೆಗಳು ಹಾಗೂ ಆಚರಣೆಗಳು.**

ಇದು ಜಾತ್ರೆಯ ಎರಡನೆಯ ದಿನವಾಗಿದ್ದು, ಅಂದು ಮುಂಜಾನೆಯಿಂದಲೆ ಹಲವು ಕಾರ್ಯಕ್ರಮಗಳು ಜರುಗುತ್ತವೆ. ಅಂದೂ ಸಂಜೆ ಆರು ಗಂಟೆಯವರೆಗೆ ಮನೆ ಮನೆಗೆ ಕೂರಿಸಿಕೊಳ್ಳುವ ಕ್ರಿಯೆಗಳು ಮುಗಿದ ನಂತರ ಸರಿಯಾಗಿ ರಾತ್ರಿ ಎಂಟು ಗಂಟೆಯಿಂದ ಪೂಜಾ ವಿಧಿ ವಿಧಾನಗಳು ಪ್ರಾರಂಭವಾಗುತ್ತವೆ. ಅಂದು ಯಜಮಾನ್ ಕೆಂಪಯ್ಯನವರ (ಮಕ್ಕಳ) ಮನೆಯಿಂದ 'ಗಟ್ಟೆ ಗಡಿಗೆ' ಯನ್ನು ಹೊರಡಿಸಲಾಗುತ್ತದೆ. ಆ ದಿನ ಸಂಜೆಯೆ ಇವರ ಮನೆಯವರು ಹೊಸ ಮಡಕೆಯನ್ನು ತಂದು, ಅದನ್ನು ಸುಣ್ಣ, ಕೆಮ್ಮಣ್ಣುಗಳಿಂದ ಅಲಂಕರಿಸಿ ಅದರೊಳಗೆ ಹೊಸ ನೀರನ್ನು ತುಂಬಿ, ಬೆಲ್ಲದ ಅಚ್ಚು, ಕಾಸು ಮೊದಲಾದವುಗಳನ್ನು ಹಾಕಿ ಮುಚ್ಚಳ ಮುಚ್ಚಿ, ಮುಚ್ಚಳದ ಮೇಲೆ ಹೊಸ ದೀಪವನ್ನು ಹಚ್ಚಿಡಲಾಡುತ್ತದೆ. ಈ ರೀತಿ ಹಚ್ಚಿಟ್ಟ ದೀಪವು ಗಟ್ಟೆ ಗಡಿಗೆಯನ್ನು ಉರಾಚೆಗೆ ಸಾಗು ಹಾಕುವವರೆಗು ಉರಿಯುತ್ತಿರಬೇಕು. ಯಾವುದೇ ಕಾರಣಕ್ಕು ಆರಬಾರದು. ಒಂದು ವೇಳೆ ಆ ರೀತಿ ಆರಿಹೋದರೆ ಊರಿಗೆ ಏನೋ ಕೆಡುಕು, ಗಂಡಾಂತರ ಕಾದಿದೆ ಎಂಬುದು ಹಳ್ಳಿಗರ ನಂಬುಗೆಯಾಗಿದೆ. ನಂತರ ಆ ಗಟ್ಟೆಯನ್ನು ಬಾಳೆಎಲೆ ಹಾಸಿ ಅದರ ಮೇಲೆ ನವಧಾನ್ಯಗಳನ್ನು ಸುರಿದು ಅದರ ಮೇಲೆ ಗಟ್ಟೆಯನ್ನು ಇಟ್ಟು, ಈ ಮನೆತನದವರು ಮೊದಲು ಪೂಜೆಯನ್ನು ಸಲ್ಲಿಸುತ್ತಾರೆ. ಇದಾದ ನಂತರ ಅಮ್ಮನವರ ಉತ್ಸವ ಮೂರ್ತಿಯೊಂದಿಗೆ ಗಟ್ಟೆಯನ್ನು ನಡೆಮುಡಿಯ ಮೇಲೆ ಕರೆ ತಂದು ಊರ ಮಧ್ಯಭಾಗದಲ್ಲಿ ದೇವರ ಉತ್ಸವ ಮೂರ್ತಿ ಇಟ್ಟು ಅದರ ಮುಂದೆ ಗಟ್ಟೆಯನ್ನು ಇಡಲಾಗುತ್ತದೆ. ಮನೆಯಿಂದ ಇಲ್ಲಿಯವರೆಗೆ ಗಟ್ಟೆ ಗಡಿಗೆ ಮತ್ತು ಅದಕ್ಕೆ ಸಂಬಂಧಿಸಿದ ವಸ್ತುಗಳನ್ನು ಕೆಂಪಯ್ಯನವರ ಮಗ ಹಾಗೂ ಅವರ ವಂಶಸ್ಥರು ತರುತ್ತಾರೆ. ಇಲ್ಲಿಂದ ನಂತರ ಇದನ್ನು ಗ್ರಾಮದ ಮಡಿವಾಳ ವೃತ್ತಿಯನ್ನು ನಿರ್ವಹಿಸುವವರು ಊರಿನ ಎಲ್ಲೆಗೆ ಸಾಗು ಹಾಕುತ್ತಾರೆ. ಹೀಗೆ ಊರ ಮಧ್ಯೆ ದೇವರನ್ನು ಹಾಗೂ ಗಟ್ಟೆಯನ್ನು ತಂದಿರಿಸಿದ ನಂತರ ಪ್ರತಿ ಬೀದಿಗೂ ಚಾಕರಿಯವರನ್ನು ಕಳಹಿಸಿ ಉಪಾರವನ್ನು ಹೊರಡಿಸಿಕೊಂಡು ಬರಲಾಗುತ್ತದೆ. ಇಲ್ಲಿಯೂ ದಿ.ಕೆಂಪಯ್ಯನವರ ಮನೆಯ ಉಪಾರವನ್ನು

ಮೊದಲು ಬೆಳಗಲಾಗುತ್ತದೆ. ನಂತರ ಆಯಾ ಕೋಮಿನ ಯಜಮಾನರು ಮತ್ತು ಗ್ರಾಮದವರ ಉಪಾರಗಳನ್ನು ಬೆಳಗಿ ಹುಯ್ಯಲಾಗುತ್ತದೆ. ಇದಾದ ತರುವಾಯದ ಪ್ರಮುಖ ಆಚರಣೆ 'ಗಟ್ಟೆ ಮರಿ' ಯನ್ನು (ಇದನ್ನು ಊರ ಮುಂದಿನ ಮರಿ ಎಂದೂ ಕರೆಯುವರು) ಬಲಿ ಕೊಡುವುದು. ಓತವೊಂದನ್ನು ಹೂವು, ಅರಿಶಿಣ, ಕುಂಕುಮಗಳಿಂದ ಸಿಂಗರಿಸಿ, ಯಜಮಾನರು ತೀರ್ಥವನ್ನು ಅದರ ಮೇಲೆ ಹಾಕುತ್ತಾರೆ. ಅದು ಒದರಿದರೆ ದೇವಿಗೆ ಜಾತ್ರೆ ಹಾಗೂ ಬಲಿಗಳೆರಡೂ ತೃಪ್ತಿ ತಂದಿವೆ ಎಂದರ್ಥ. ಒಂದು ವೇಳೆ ಒದರದೆ ಸುಮ್ಮನೆ ನಿಂತರೆ ದೇವಿ ಮುನಿದಿದ್ದಾಳೆಂದು ಹರಕೆಯನ್ನು ಹೊರುವರು. ಯಾವುದೇ ಕಾರಣಕ್ಕೂ ಮರಿ ಒದರದಿದ್ದರೆ ಬಲಿ ಕೊಡುವುದಿಲ್ಲ, ಒದರುವವರೆಗೂ ಕಾಯುತ್ತಾರೆ. ಈ ರೀತಿ 'ಗಟ್ಟೆ ಮರಿ' ಯನ್ನು ಬಲಿಕೊಟ್ಟ ನಂತರ ಅದರ ರಕ್ತ ಮಿಶ್ರಿತವಾದ ಉಪಾರವನ್ನು ಬಿಳಿ ಪಂಚೆಯಲ್ಲಿ ಗಂಟು ಕಟ್ಟಿಕೊಂಡು, ಗಟ್ಟೆ ಗಡಿಗೆಯ ಜೊತೆಗೆ ನೀರು, ಪೂಜಾ ಸಾಮಗ್ರಿ ಮೊದಲಾದವುಗಳೊಡನೆ ಅದನ್ನು ಊರಿನಿಂದ ತೆಗೆದುಕೊಂಡು ಹೋಗಿ 'ಎಲ್ಲೆ' (ಊರಿನಿಂದ ಹೊರಗೆ) ಗೆ ಬಿಡಲಾಗುತ್ತದೆ.

ಈ ರೀತಿ ಗಟ್ಟೆಯನ್ನು ಬಿಡಲು ಹೋಗುವಾಗ ಅದಕ್ಕೆ ಯಾರೂ ಎದುರು ತಾಕುವುದಿಲ್ಲ. ಜೊತೆಗೆ 'ಅಟಗಾವು' ಮಾಡುವುದಿಲ್ಲ. ಒಂದು ವೇಳೆ ಆ ರೀತಿ ಮಾಡಿದರೆ ರಕ್ತಕಾರಿ ಸಾಯುವರೆಂದು ನಮ್ಮೂರಿನ ಹಿರಿಯರು ಹೇಳುತ್ತಾರೆ. ಹೀಗೆ ತೆಗೆದುಕೊಂಡು ಹೋದ ಗಟ್ಟೆ, ಉಪಾರ, ನೀರು, ನವಧಾನ್ಯ ಮೊದಲಾದವುಗಳೆಲ್ಲವನ್ನು 'ಜೋಗಿಕಟ್ಟೆ' ಕೆರೆಯ ಕೋಡಿಯ ಮುಂದೆ ಇರುವ 'ಈಚಲ' ಮರಗಳ ಕೆಳಗೆ ಇಟ್ಟು, ಕೊನೆಯಲ್ಲಿ ಪೂಜೆ ಮಾಡಿ ಬರಲಾಗುತ್ತದೆ. ಈ ರೀತಿ ಬರುವಾಗ ಯಾವುದೇ ಕಾರಣಕ್ಕೂ ಹಿಂದಿರುಗಿ ನೋಡಬಾರದೆಂದು ನನ್ನ ತಂದೆ ಹಾಗೂ ಹಿರಿಯರು ಹೇಳುವರು. ಕಾರಣ ಆ ರೀತಿ ಇಟ್ಟು ಬಂದ ಉಪಾರ, ಗಟ್ಟೆ, ನೀರು ಮೊದಲಾದವುಗಳನ್ನು ಕಾಳಘಟ್ಟಮ್ಮನವರು ಅಂದು ರಾತ್ರಿ ತನ್ನ ಅಕ್ಕ ತಂಗಿಯರಿಗೆ ಮತ್ತು ಮಾರಿ ದೇವತೆಗಳಿಗೆ ಊಟವನ್ನು ಹಾಕಿ ಅವರನ್ನು ಸಂತೃಪ್ತಿಗೊಳಿಸಿ, ಊರ ಕಡೆಗೆ ಅವರ ಗಮನ ಹರಿಯದಂತೆ ಹಾಗೂ ಊರಿಗೆ ಯಾವುದೇ ರೀತಿಯ ರೋಗ ರುಜಿನಗಳನ್ನು ತಂದೊಡ್ಡದಂತೆ ಮಾಡುತ್ತಾಳೆನ್ನುವುದು ಹಳ್ಳಿಗರ ನಂಬುಗೆಯಾಗಿದೆ.

ಇತ್ತ ಗ್ರಾಮದಲ್ಲಿ ಗಟ್ಟೆ ಗಡಿಗೆ ಹೊರಗೆ ಹೋದ ಮೇಲೆ ದೇವರನ್ನು ದೇವಾಲಯದ ಜಗುಲಿಯಲ್ಲಿ ಇಳಿಸಿ ಚಾಕರಿಯವರ ಊಟಗಳಾದ ನಂತರ 'ಕಳಸ' (ಹಿತ್ತಾಳೆಯ ಬೋಗುಣಿಯ ಮಧ್ಯಭಾಗದಲ್ಲಿ ಹುಣಸೆ ಹಣ್ಣು ಮೆತ್ತಿ ಅದರ ಮೇಲೆ ಕಳಸದ ಚೊಬನ್ನಿಟ್ಟು, ಅದರೊಳಗೆ ಹೊಸ ನೀರು, ಕಾಸು, ಬೆಲ್ಲ ಹಾಕಿ, ವೀಳ್ಯದ ಎಲೆ ಇಟ್ಟು ಹೊಂಬಾಳೆಯನ್ನಿಡುವುದು ಮತ್ತು ಕಳಸದ ಚೊಬಿನ ಸುತ್ತ ಅಕ್ಕಿಯನ್ನು ಸುರಿದು ಮಾಡಿದ ಶುಭ ಸೂಚಕ ವಸ್ತು) ವನ್ನು ಹೊರಡಿಸಲಾಗುತ್ತದೆ. ಅದೆ ಕೆಂಪಯ್ಯನವರ ಮನೆಯಿಂದ ಪೂಜಾ ವಿಧಿ ವಿಧಾನಗಳ ಮೂಲಕ 'ಕಳಸ' ಹಾಗೂ 'ಆರತಿ' (ಕಡಲೆ ಹಿಟ್ಟನ್ನು/ಪುಡಿಯನ್ನು ಬೆಲ್ಲದ ಪಾಕದಿಂದ ಕಲಸಿ, ಎಳ್ಳು, ಕಡಲೆ ಬೀಜ ಮೊದಲಾದವುಗಳನ್ನು ಮಿಶ್ರಣ ಮಾಡಿ ಚೌಕಾಕಾರವಾಗಿ ಮಿದ್ದು ಮಾಡಿದ ತೊಮ್ಮಟದ ಉಂಡೆಗಳು. ಅದನ್ನು ಮತ್ತೆ ಹಿತ್ತಾಳೆಯ ದಬರಿಗೆ ಇಟ್ಟು ಅದರ ಸುತ್ತಲು ಹೊಂಬಾಳೆಯನ್ನು ನಿಲ್ಲಿಸಿ ಹೂವಿನಿಂದ ಅಲಂಕರಿಸಲಾಗಿರುತ್ತದೆ.) ಗಳನ್ನು ಹೊರಗೆ ತಂದು ಕಳಸದ ಮರಿಯನ್ನು ಬಲಿಕೊಡಲಾಗುತ್ತದೆ.

ನಂತರ ಕಳಸ ಹಾಗೂ ಆರತಿಗಳನ್ನು 'ನಡೆ ಮುಡಿ' ಯ ಮೇಲೆ ಕರೆತಂದು ಊರ ಮಧ್ಯದಲ್ಲಿ ಬಿಡಲಾಗುತ್ತದೆ. ತರುವಾಯ ಕೆಂಪಯ್ಯನವರ ವಂಶದವರು ಹಾಗೂ ಉಳಿದ ಪ್ರತಿ ಮನೆಗಳಿಗೂ ಹೋಗಿ ಆರತಿ ಹೊರಡಿಸಿಕೊಂಡು ಬಲಿ ಪಡೆದು ಬರಲಾಗುತ್ತದೆ. ಇಲ್ಲಿಯೂ ಮರಿ ಒದರಲೇ ಬೇಕು. ಸಂಪೂರ್ಣವಾಗಿ ಊರಿನ ಆರತಿಗಳನ್ನು ಹೊರಡಿಸಿ, ಬಲಿ ಪಡೆದ ಮೇಲೆ ಎಲ್ಲ ಆರತಿಗಳನ್ನು ಕರೆತಂದು ನೆಲೆ ದೇವರ ದೇವಾಲಯದ ಬಳಿ ಬಿಟ್ಟು, ನಂತರ ಉತ್ಸವ ಮೂರ್ತಿಯು ದಲಿತ ಕೇರಿಗೆ ಪ್ರವೇಶಿಸುತ್ತದೆ. (ಗ್ರಾಮಕ್ಕೆ ಸೇರಿದಂತೆ ಎರಡು ಮನೆ ಮಾತ್ರ ಹೊಲೆಯ ಸಮುದಾಯಗಳಿದ್ದರೂ, ಆಡಳಿತಾತ್ಮಕವಾಗಿ ಗೌತಮಾರನಹಳ್ಳಿಯಲ್ಲಿ ಗುರ್ತಿಸಿಕೊಂಡಿರುವ ಸು.ಮೂವತ್ತು ಮನೆ ಹೊಲೆಯ ಸಮುದಾಯಗಳು ಈ ದೇವಿಯ ಆರಾಧಕರಾಗಿದ್ದಾರೆ. ಜಾತ್ರೆಯ ವಿಷಯವಾಗಿ ಗೌರಿಪುರ ಗ್ರಾಮದ ಜೊತೆ ಸಂಬಂಧವಿರಿಸಿಕೊಂಡಿದ್ದು, ಪ್ರತಿವರ್ಷ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ.) ಈ

ವೇಳೆಗಾಗಲೆ ಬೆಳಕು ಮೂಡಿ ಸುಮಾರು ಎಂಟು ಗಂಟೆಯಾಗಿರುತ್ತದೆ. ಈ ರೀತಿ ದಲಿತ ಕೇರಿಗೆ ಬಂದು ಮೊದಲು ಆ ಕೋಮಿನ ಯಜಮಾನರ ಆರತಿ ಹಾಗೂ ಬಲಿಯಾದ ನಂತರ ಉಳಿದ ವ್ಯಕ್ತಿಗಳ ಮನೆಗಳ ಆರತಿ ಹಾಗೂ ಬಲಿ ಪಡೆದು ಆ ಆರತಿಗಳನ್ನು ಮೆರವಣಿಗೆ ಮೂಲಕ ನೆಲೆ ದೇವರ ದೇವಾಲಯದ ಬಳಿ ಕರೆತರಲಾಗುತ್ತದೆ. ಇದು ಬುಧವಾರದ ದಿನವಾಗಿದ್ದು, ಅಂದು ಬಾಡೂಟವಿರುತ್ತದೆ. ಈ ರೀತಿ ಕರೆ ತಂದ ಎಲ್ಲಾ ಆರತಿಗಳನ್ನು (ದಲಿತರ ಆರತಿಗಳು ಪ್ರತ್ಯೇಕವಾಗಿರುತ್ತವೆ) ಮೂರು ಸುತ್ತು ದೇವಾಲಯ ಪ್ರದಕ್ಷಿಣೆ ಹಾಕಿಸಿ ನಂತರ ಉತ್ಸವ ಮೂರ್ತಿಯನ್ನು ದೇವಾಲಯದೊಳಗೆ ಇಳಿಸಿದ ಮೇಲೆ ಮೊದಲು ಕಳಸದವರ ಮನೆಯ ಆರತಿ ಬೆಳಗಿದ ನಂತರ ಉಳಿದವರ ಆರತಿಗಳನ್ನು ಬೆಳಗಿಸಿ ಕಳುಹಿಸಲಾಗುತ್ತದೆ. ಇಲ್ಲಿಗೆ ಜಾತ್ರೆಯ ಬಹುಪಾಲು ಆಚರಣೆಗಳು ಮುಕ್ತಾಯವಾಗುತ್ತವೆ. ಮನೆಗಳಿಗೆ ತೆರಳಿದ ಭಕ್ತರು ಬಂಧು ಬಳಗ ನೆಂಟರಿಷ್ಟರೊಡನೆ ಬಾಡೂಟ ಸವಿದು ನಲಿಯುತ್ತಾರೆ. ಈ ವೇಳೆ ಕಳಸ ನೆಲೆ ದೇವರ ದೇವಾಲಯದಲ್ಲಿಯೆ ಇರುತ್ತದೆ. ಈ ದಿನ 'ಕೈವಾಡ' ದವರು 'ಹೆಂಡದ ರಾಗಿ' ಮತ್ತು ದುಡ್ಡನ್ನು ಎತ್ತುವ (ಪಡೆಯುವ) ಕೆಲಸ ನಡೆಯುತ್ತದೆ.

**ಗುರುವಾರದ ದಿನದ ಆಚರಣೆಗಳು**

ಈ ದಿನ 'ಧೂಳು ಮೆರವಣಿಗೆ' ಮತ್ತು 'ವಾನ' ವಿರುತ್ತದೆ. ಇದಕ್ಕೆ ಮೊದಲು ಬೆಳಿಗ್ಗೆಯೆ ಉತ್ಸವ ಮೂರ್ತಿಯೊಂದಿಗೆ ಹೋಗಿ ದೇವಾಲಯದಲ್ಲಿಟ್ಟಿದ್ದ 'ಕಳಸ' ವನ್ನು ಮತ್ತೆ ಕಳಸದವರ ಮನೆಗೆ ತಂದು ಬಿಡಲಾಗುತ್ತದೆ. ನಂತರ ಉತ್ಸವ ಮೂರ್ತಿಯನ್ನು 'ವಾನ' ದ ಮೇಲೆ ತಂದು ಕೂರಿಸಲಾಗುತ್ತದೆ. ಇದಾದ ಮೇಲೆ ಧೂಳು ಮೆರವಣಿಗೆ ಪ್ರಾರಂಭವಾಗುತ್ತದೆ. ಅಂದು ಪ್ರತಿ ಮನೆಯಲ್ಲೂ ಹಣ್ಣು ಕಾಯಿ ಮಾಡಿಸಿಕೊಂಡು, ಮಡಿಲಕ್ಕಿ ಪಡೆದುಕೊಳ್ಳುತ್ತಾಳೆ ಯಾಯಿ. ಜೊತೆಗೆ 'ಈಡುಗಾಯಿ' ಯೂ ಇರುತ್ತದೆ. ಎಲ್ಲ ಮನೆಗಳಿಂದ ಪೂಜೆಯಾದ ನಂತರ ರಾತ್ರಿಗೆ ಅಮ್ಮನವರ ವಾನವು ರಾಜ ಬೀದಿಗಳಲ್ಲಿ ಮೆರವಣಿಗೆ ಸಾಗುತ್ತದೆ. ಇಲ್ಲಿಗೆ ಆ ವರ್ಷದ ಜಾತ್ರೆ ಸಂಪೂರ್ಣವಾದ ಹಾಗೆ. ನಂತರ ತಿಂಗಳಿಗೆ ಸರಿಯಾಗಿ 'ತಿಂಗಳು ಪರಿಷೆ' ಮಾಡಲಾಗುತ್ತದೆ. ಅಂದೂ ಪ್ರತಿ ಮನೆಗಳಿಗೂ ಹೋಗಿ ಹಣ್ಣು, ಕಾಯಿ, ಮಡಿಲಕ್ಕಿ ಪಡೆಯುವ ರೂಢಿ ಇದೆ. ಅನುಕೂಲಸ್ಥರು ಅಂದು ಸಹ ಬಲಿ ಕೊಡುವರು.

ಧೂಳು ಮೆರವಣಿಗೆಯ ದಿನ 'ಕುರುವು' ಕೇಳುವ, 'ಮರೆ' ಹಾಕಿಸುವ, 'ಹರಕೆ' ಹೊರುವ ಮೊದಲಾದ ಆಚರಣೆಗಳು ಜರುಗುತ್ತವೆ. ದೈವದ ಬಗ್ಗೆ ಗ್ರಾಮದವರಲ್ಲಿ ಅಪಾರ ಭಕ್ತಿ ಹಾಗೂ ನಂಬಿಕೆಗಳಿದ್ದು, ದೈವ ಸತ್ಯವಂತೆ ಎಂದು ತಿಳಿಸುತ್ತಾರೆ. ಏಕೆಂದರೆ ಬಹಳ ವರ್ಷಗಳ ಹಿಂದೆ ಪ್ಲೇಗ್ ಮಾರಿ ಬಂದು ಈ ಗ್ರಾಮದ ಅಕ್ಕ ಪಕ್ಕದ ಗ್ರಾಮಗಳ ಜನ, ಜಾನುವಾರುಗಳು ಸತ್ತು, ಗ್ರಾಮದವರೆಲ್ಲ ಊರನ್ನು ತೊರೆದಾಗ ಈಕೆ ಈ ಗ್ರಾಮದವರಿಗೆ ಅಭಯವನ್ನಿತ್ತು "ಏರಿಸಿದ ಬಾನವನ್ನು ಇಳಿಸುವುದಿಲ್ಲ" ಎಂದು ಬಲಗೈ ಭಾಷೆ ಕೊಟ್ಟು ಹಳ್ಳಿಗರನ್ನು ಊರು ಬಿಡದಂತೆ ರಕ್ಷಿಸಿದ್ದಾಳೆ ಹಾಗೂ ಹೊರಗಿನ ಮಾರಿಗಳನ್ನು ಊರೊಳಗೆ ಬರದಂತೆ ತಡೆದಿದ್ದಾಳೆ. ಈ ಕಾರಣವಾಗಿಯೆ ಪ್ರತಿವರ್ಷ ಗಟ್ಟೆ ಗಡಿಗೆ ಮತ್ತು ಉಪಾರವನ್ನು ಸಾಗು ಹಾಕುವುದು. ಈ ದೇವಿಗೆ ಬಲಿ, ಹರಕೆ, ಕುರುಹು, ಪ್ರಸಾದ ಕೇಳುವ ಆಚರಣೆಗಳು ಜರುಗುತ್ತವೆ. ಈಕೆಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರಗಳಂದು ಪೂಜಾ ಕಾರ್ಯಗಳು ನಡೆಯುತ್ತವೆ. ತುಮಕೂರು, ಬೆಂಗಳೂರು, ಮಾಗಡಿ, ಕುನಿಗಲ್ಲು, ಗುಬ್ಬಿ ಮೊದಲಾದ ಕಡೆ ಈಕೆಯ ಭಕ್ತರಿದ್ದು ಪ್ರತಿ ವರ್ಷ ಜಾತ್ರೆಯ ದಿನ ಬಂದು ಪೂಜೆ ಮಾಡಿಸಿಕೊಂಡು ಹೋಗುತ್ತಾರೆ.

ಗ್ರಾಮದಲ್ಲಿ ಚಾಕರಿಯವರಿಗೆ, ಪೂಜಾರಿಗೆ, ದಾಸಪ್ಪ ಮತ್ತು ಮಡಿವಾಳರಿಗೆ 'ಅಡದಿ' ನೀಡುವ ಪದ್ಧತಿ ಇದ್ದು, ಹಣ, ರಾಗಿ, ಭತ್ತ, ಅಡಕೆ ಮೊದಲಾದವುಗಳನ್ನು ನೀಡಲಾಗುತ್ತದೆ. ಮಡಿವಾಳರಿಗೆ ಪ್ರತಿವರ್ಷ ಜಾತ್ರೆಯಲ್ಲಿ ಬಲಿ ಕೊಡುವ ಎಲ್ಲ ಮನೆಗಳಲ್ಲಿನ ಮರಿಗಳ ತಲೆಗಳನ್ನು ನೀಡುವ ಪದ್ಧತಿ ಇಂದಿಗೂ ಇದೆ.

ಹಳ್ಳಿಯಲ್ಲಿ ಬಸವ ಜಯಂತಿ ಹಾಗೂ ಶ್ರೀರಾಮನವಮಿಗಳನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ಅಂದು ಪಾನಕ, ಹೆಸರು ಬೇಳೆ, ಮಜ್ಜಿಗೆಯ ವಿತರಣೆ ಇರುತ್ತದೆ. ಹೆಸರು ಬೇಳೆ ನೀಡಲು ಮುತ್ತುಗದ ಎಲೆ ಬಳಸುವುದು ವಿಶೇಷ.

ಇದಲ್ಲದೆ ಎಲ್ಲ ಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ. ವರ ಮಹಾಲಕ್ಷ್ಮೀ ಹಬ್ಬದಂದು ಮನೆಯಲ್ಲಿ ಪೂಜೆ ಮಾಡಿ, ದೇವಸ್ತಾನಕ್ಕೆ ಹೋಗಿ ಬರುತ್ತಾರೆ. ಅನುಕೂಲಸ್ಥರು ಮನೆಗಳಲ್ಲಿ ಲಕ್ಷ್ಮೀಯನ್ನು ಪೂಜಿಸುತ್ತಾರೆ. ದೊಡ್ಡ ತಟ್ಟೆ ಅಥವಾ ಬೋಗುಣಿಯಾಕಾರದ ಪಾತ್ರೆಯಲ್ಲಿ ಕಳಸವನ್ನು ಪೂಜಿಸಿ, ಕೆಲವರು ಲಕ್ಷ್ಮಿಯ ಫೋಟೋವನ್ನು ಇಟ್ಟು, ಅದರ ಸುತ್ತಲು ಹಣವನ್ನಿಟ್ಟು, ಪೂಜೆ ಮಾಡಿ, ಮುತ್ತೈದೆಯರಿಗೆ ಅರಿಶಿಣ ಕುಂಕುಮ, ಬಳೆಗಳನ್ನು ನೀಡುತ್ತಾರೆ.

'ಗೌರಿ ಗಣೇಶ' ಹಬ್ಬವನ್ನು ಬಹಳ ಸಡಗರದಿಂದ ಆಚರಿಸಲಾಗುತ್ತದೆ. ಜೊತೆಗೆ ತವರಿಂದ ಮದುವೆಯಾಗಿ ಹೋಗಿರುವ ಹೆಣ್ಣು ಮಕ್ಕಳಿಗೆ ಹಬ್ಬದ ಹಿಂದಿನ ದಿನವೇ ಹೋಗಿ ಅಣ್ಣ ಅಥವಾ ತಮ್ಮಂದಿರು 'ಬಾಗಿನ' ವನ್ನು ನೀಡಿ ಬರುವರು. ಕೆಲವರು ಮನೆಗಳಲ್ಲಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜಿಸಿದರೆ, ಉಳಿದವರು ಸಾಮೂಹಿಕವಾಗಿ ಪ್ರತಿಷ್ಠಾಪಿಸಿ ಪೂಜೆಯನ್ನು ಸಲ್ಲಿಸಿ ತಮ್ಮ ಭಕ್ತಿಯನ್ನು ವ್ಯಕ್ತಪಡಿಸುತ್ತಾರೆ.

ಹಳ್ಳಿಗರು 'ಮಾರ್ನಾಮಿ ಹಬ್ಬ' ವನ್ನು 'ಹಿರಿಯರ ಹಬ್ಬ' ವೆಂದು ಆಚರಿಸುತ್ತಾರೆ. ಅಂದು ತಮ್ಮ ಹಿರಿಯರ ಹೆಸರಲ್ಲಿ ಪೂಜೆ ಸಲ್ಲಿಸಿ ಧೂಪ ಹಾಕುತ್ತಾರೆ. ಒಕ್ಕಲಿಗ ಸಮುದಾಯದವರು ಅಮಾವಾಸ್ಯೆಯಾದ ನಂತರದ ಶನಿವಾರದಂದು ಸಿಹಿ ಅಡುಗೆಯನ್ನು ಮಾಡಿ ಹಬ್ಬವನ್ನು ಮಾಡುತ್ತಾರೆ. ಅಂದು ಗ್ರಾಮದವರು ಇವರ ಮನೆಗಳಲ್ಲಿ ಊಟ ಮಾಡಿ ಹೋಗುತ್ತಾರೆ. ತಿಗಳ, ಬೆಸ್ತ ಹಾಗೂ ಉಳಿದ ಸಮುದಾಯದವರು ಈ ಹಬ್ಬದಂದು ಮಾಂಸದ ಅಡುಗೆಯನ್ನು ಮಾಡಿ ಇತರರನ್ನು ಊಟಕ್ಕೆ ಕರೆಯುವ ಪದ್ಧತಿ ಇದೆ.

ಹಿಂದೆ ಈ ಹಬ್ಬದಂದು ಹೊಲ ಗದ್ದೆಗಳ ಬಳಿ ಕೊಟ್ಟು 'ಹಸಿರು ಹಾಕುವ' ಮತ್ತು 'ಬೆಚ್ಚಿನ ಹಬ್ಬ' ಮಾಡುತ್ತಿದ್ದರು. ಬೆಳೆಗೆ ಯಾವುದೇ ರೀತಿಯ ರೋಗ ಬಾರದಿರಲೆಂಬುದು ಇದರ ಹಿಂದಿನ ಉದ್ದೇಶವಾಗಿದೆ. ಈಗ ಅದು ಕಣ್ಮರೆಯಾಗಿದ್ದು, ಕೆಲವರು ಮನೆಗಳಲ್ಲಿ ಬಲಿ ಕೊಟ್ಟ ಪ್ರಾಣಿಗಳ ರಕ್ತವನ್ನು ಎಡೆಯಲ್ಲಿ ಬೆರೆಸಿಕೊಂಡು ಹೋಗಿ ಹೊಲ ಗದ್ದೆಗಳಿಗೆ ಎರಚುವುದು ಕಂಡುಬರುತ್ತದೆ.

ಹಳ್ಳಿಯಲ್ಲಿ ವಿಜಯದಶಮಿ ಹಾಗೂ ಆಯುಧ ಪೂಜಾ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಮನೆಗಳಲ್ಲಿ ಅಂದು ಪುಸ್ತಕ, ವಾಹನ ಹಾಗೂ ಆಯುಧಗಳನ್ನು ಇಟ್ಟು ಪೂಜಿಸಿದರೆ, ದೇವಾಲಯದಲ್ಲಿ 'ಬನ್ನಿ ಮರ' ಕತ್ತರಿಸುವ ಪ್ರಮುಖ ಆಚರಣೆ ಜರುಗುತ್ತದೆ. ನವರಾತ್ರಿಗೆ ಒಂಭತ್ತು ದಿನಗಳ ಮೊದಲೆ ಕಾಳಘಟ್ಟಮ್ಮ ದೈವವನ್ನು 'ಪಟ್ಟ' ಕ್ಕೆ ಕೂರಿಸಲಾಗುತ್ತದೆ. ಈ ರೀತಿ ಪಟ್ಟಕ್ಕೆ ಕೂತ ನಂತರ ಯಾವುದೆ ಮೆರವಣಿಗೆಗಳಾಗಲಿ, ಇನ್ನಿತರ ಕಾರ್ಯಕ್ರಮಗಳಿಗಾಗಲಿ ಉತ್ಸಹ ಮೂರ್ತಿಯನ್ನು ದೇವಾಲಯದಿಂದ ಹೊರತರಲಾಗುವುದಿಲ್ಲ. ವಿಜಯ ದಶಮಿಯ ದಿನ 'ಬನ್ನಿ ಮರ ಕತ್ತರಿಸುವ' ಕಾರ್ಯಕ್ರಮವಿದ್ದು, ದೇವಿಗೆ ಎದುರಾಗಿ ಒಂದು ಬಾಳೆ ಕಂದನ್ನು ನಿಲ್ಲಿಸಿ, ಪುಣ್ಯ ಮಾಡಿ ಅದಕ್ಕೆ ಸುತ್ತಲೂ ಬನ್ನಿ ಮರದ ಚಿಕ್ಕ ಚಿಕ್ಕ ರೆಂಬೆಗಳನ್ನು ಕಟ್ಟಗಾಗುವುದು. ಮೂರು ಬಿದಿರಿನಿಂದ ಮಾಡಿದ ಬಾಣಗಳನ್ನು ಆ ಬನ್ನಿಮರಕ್ಕೆ ಮೂರು ಸುತ್ತು ಪ್ರದಕ್ಷಿಣೆ ಹಾಕುತ್ತ ಚುಚ್ಚಲಾಗುತ್ತದೆ. ಗೌರಿಪುರ ಗ್ರಾಮದ ಪಕ್ಕದ ಗ್ರಾಮದಲ್ಲಿನ ಬ್ರಾಹ್ಮಣರೊಬ್ಬರು ಈ ಪೂಜಾ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಾರೆ. ಇದಾದ ನಂತರ ಅವರೆ ಕತ್ತಿಯಿಂದ ಅದನ್ನು ಕತ್ತರಿಸುವ ಮೂಲಕ ಆ ಆಚರಣೆ ಅಲ್ಲಿಗೆ ಮುಕ್ತಾಯವಾಗುತ್ತದೆ. ಈ ಸಂದರ್ಭದಲ್ಲಿ ಎಲ್ಲ ಕೋಮಿನ ಯಜಮಾನರು, ಗಟ್ಟೆ ಹಾಗೂ ಕಳಸದ ಮನೆಯವರು, ಎಲ್ಲ ಗ್ರಾಮಸ್ಥರು ಅಲ್ಲಿ ಹಾಜರಿರುತ್ತಾರೆ. ಕೊನೆಗೆ ಅದರಲ್ಲಿನ ಬನ್ನಿ ಪತ್ರೆಗಳನ್ನು ಕಿತ್ತುಕೊಂಡು ಪೂಜೆ ಮಾಡಿಸಿಕೊಂಡ ಎಲ್ಲ ಭಕ್ತರಿಗೆ ನೀಡಲಾಗುತ್ತದೆ.

ದೀಪಾವಳಿ ಹಬ್ಬವನ್ನು ಮೂರು ದಿನಗಳ ಕಾಲ ಆಚರಿಸುತ್ತಾರೆ. ತಿಪ್ಪಮ್ಮನನ್ನು ಪೂಜಿಸುವುದು, ನೀರು ತುಂಬುವ ಹಬ್ಬ, ನಂತರ ಕೊನೆಯ ದಿನ ಪಟಾಕಿಗಳನ್ನು ಸಿಡಿಸುವುದು ಕಂಡುಬರುತ್ತದೆ. ಈ ಮೂರು ದಿನವೂ ಕೂಡ ಮನೆಯ ಬಾಗಿಲ ಎರಡೂ ಕಡೆ ಸಗಣಿಯ ಉಂಡೆಗಳನ್ನು ಮಾಡಿ ಅದರ ಮೇಲೆ ಮಣ್ಣಿನ ಹಣತೆಯನ್ನು ಇಟ್ಟು ಅದಕ್ಕೆ ಉಚ್ಚಳ್ಳಿನ ಹೂವು, ಅಣ್ಣೆ ಹೂವು, ಜೋಳದ ತೆನೆಗಳನ್ನು ಚುಚ್ಚಿ ದೀಪವನ್ನು ಹಚ್ಚುತ್ತಾರೆ. ಉಳಿದರೆ ಹೊಸ ಬಟ್ಟೆ, ವಿಶೇಷ ಅಡುಗೆಗಳಿರುತ್ತವೆ.

ಈ ಹಬ್ಬದಲ್ಲಿ ದೇವಾಲಯದ ಪೂಜಾರಿ ಹಾಗೂ ಯುವಕರು ಭಜನೆಯ ಪದಗಳನ್ನು ಹಾಡುತ್ತ, ಪ್ರತಿ ಮನೆಗು ಭೇಟಿ ಕೊಡುತ್ತ, ಅದಕ್ಕೆ ಎಣ್ಣೆ ಹಾಕಿಸಿಕೊಳ್ಳುತ್ತಾರೆ. ಗರುಡ ಗಂಬದ ದೀಪದಿಂದ ಮನೆಯವರ ದೀಪವನ್ನು ಹಚ್ಚಿ ಮುಂದಿನ ಮನೆಗೆ ಹೋಗುವ ಸಂಪ್ರದಾಯವಿದೆ. ಇದಕ್ಕೆ 'ದೀಪ ಕೊಡುವುದು' ಎನ್ನುವರು.

ದೇವಾಲಯದಲ್ಲಿಯೂ ಅಂದು ವಿಶೇಷ ಕಾರ್ಯಕ್ರಮಗಳಿರುತ್ತವೆ. ದೇವಾಲಯದ ಮುಂದೆ ಒಂದು ದೊಡ್ಡ ಕಂಬವನ್ನು ನಿಲ್ಲಿಸಿ ಅದರ ಮೇಲ್ತುದಿಯಲ್ಲಿ ಒಂದು ದೀಪವನ್ನು ಹಚ್ಚಿಡಲಾಗುತ್ತದೆ. ಅದನ್ನು 'ದೀಪ ಏರಿಸುವುದು' ಎನ್ನಲಾಗುತ್ತದೆ. ಹೀಗೆ ಒಂಭತ್ತು ದಿನಗಳವರೆಗೆ ದೀಪ ಏರಿಸಿ ಪೂಜಿಸಿದ ನಂತರ ಕೊನೆಯ ದಿನ ಗ್ರಾಮದವರೆಲ್ಲ ಸೇರಿ ವಿಶೇಷ ಪೂಜೆ, ಅನ್ನ ಸಂತರ್ಪಣೆಗಳ ಮೂಲಕ ದೀಪೋತ್ಸವವನ್ನು ಏರ್ಪಡಿಸಿ ದೇವಾಲಯದ ಸುತ್ತಲು ದೀಪಗಳನ್ನು ಹಚ್ಚುವ ಮೂಲಕ ತಮ್ಮ ಭಕ್ತಿಯನ್ನು ಅರ್ಪಿಸುತ್ತಾರೆ.

'ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತಾಡು' ಎಂಬ ಆಶಯದೊಂದಿಗೆ ಸಂಕ್ರಾಂತಿ ಹಬ್ಬವನ್ನು ಆಚರಿಸುತ್ತಾರೆ. ಗ್ರಾಮದವರು ದೇವಾಲಯದಲ್ಲಿ ಪೂಜೆ ಸಲ್ಲಿಸಿ ಎಲ್ಲರಿಗೂ ಎಳ್ಳು ಬೆಲ್ಲವನ್ನು ಹಂಚುತ್ತಾರೆ. ಮನೆಗಳಲ್ಲಿ ಕಬ್ಬು, ಕಡಲೆಕಾಯಿ, ಗೆಣಸು, ಅವರೆ ಕಾಯಿಗಳನ್ನು ತಿಂದು ನಲಿಯುತ್ತಾರೆ. ಮುಖ್ಯವಾಗಿ ಇದು ರಾಸುಗಳ ಹಬ್ಬವಾಗಿದ್ದು, ಅಂದು ಮುಂಜಾನೆಯೆ ಮನೆಗಳಲ್ಲಿನ ದನ ಕರುಗಳ ಮೈ ತೊಳೆದು ಅವುಗಳ ಕೊಂಬಿಗೆ ಹರಳೆಣ್ಣೆ ಸವರಿ, ಅರಿಶಿಣ, ಕುಂಕುಮಗಳನ್ನಿಟ್ಟು, ಹೂವುಗಳಿಂದ ಅಲಂಕರಿಸಿ ಪೂಜಿಸಿ ಅವುಗಳ ಆಶೀರ್ವಾದವನ್ನು ಪಡೆದುಕೊಳ್ಳುತ್ತಾರೆ. ಮೊದಲು 'ಕಿಚ್ಚು ಹಾಯಿಸುವ' ಆಚರಣೆ ನಡೆಯುತ್ತಿತ್ತು. ಆದರೆ ಈಗ ನಿಂತು ಹೋಗಿದೆ.

ಕೊನೆಯ ಹಬ್ಬವಾಗಿ ಶಿವರಾತ್ರಿ ಹಬ್ಬವನ್ನು ಭಕ್ತಿ ಗೌರವಗಳ ಮೂಲಕ ಆಚರಿಸುವ ಜನತೆ ಅಂದು ಬೆಳಗ್ಗಿನಿಂದ ಸಂಜೆಯವರೆಗೆ ಉಪವಾಸವಿದ್ದು, ನಂತರ ಸಂಜೆ ಮನೆಗೆ ಬಂದ 'ವಡಾರಯ್ಯ' ನಿಗೆ 'ಒಣಪಡಿ' ಕೊಟ್ಟು ಪೂಜಿಸಿದ ನಂತರ ಊಟ ಸೇವಿಸುವ ಕ್ರಮವಿದೆ. ಇನ್ನು ಕೆಲವರು ಅಂದು ರಾತ್ರಿ ಕೂಡ ಉಪವಾಸ ಮತ್ತು ಜಾಗರಣೆ ಮಾಡುವ ಸಂಪ್ರದಾಯವಿದೆ. ಅಂದು ಗ್ರಾಮದವರು ಹತ್ತಿರದಲ್ಲಿರುವ ಕ್ಯಾತ್ಸಂದ್ರದ ಸಿದ್ದಗಂಗಾ ಮಠದ ಸಿದ್ದಲಿಂಗೇಶ್ವರ ಸ್ವಾಮಿ ಹಾಗೂ ಮೈದಾಳ ಗ್ರಾಮದ ಬಳಿ ಇರುವ ಅಯ್ಯನಪಾಳ್ಯದ ನಂಜುಡೇಶ್ವರ ಸ್ವಾಮಿಯ ದರ್ಶನವನ್ನು ಮಾಡಿ ವಿಶೇಷವಾದ ಪೂಜೆಯನ್ನು ಸಲ್ಲಿಸುವರು. ಉಳಿದಂತೆ ಗ್ರಾಮದೇವತೆಗೆ ಪೂಜೆ ಇದ್ದೇ ಇರುತ್ತದೆ.

ಈ ಗ್ರಾಮದ ಒಕ್ಕಲಿಗ ಸಮುದಾಯದ ನರಸಿಂಹಯ್ಯ (ಪುರಿ ಮೂಟೆ) ಎಂಬುವವರು ನಾಟಿ ಔಷಧಿಗಳನ್ನು ನೀಡುವ ವ್ಯಕ್ತಿಗಳಾಗಿದ್ದರು. 'ಕೈ ಮಸಕಿ' ಗೆ ಮದ್ದು ಕೊಡುವ, 'ಉಸಿರು ಮದ್ದು ಸೊಪ್ಪು' ಕೊಡುವ, ಅಲ್ಲದೆ ಉಳುಕು ತೆಗೆಯುವ ಕೆಲಸಗಳನ್ನು ಮಾಡುತ್ತಿದ್ದರು. ಆದರೆ ಇವರ ಅಕಾಲಿಕ ಮೃತ್ಯು ಜನಪದ ವೈದ್ಯ ಲೋಕಕ್ಕಾದ ನಷ್ಟವೇ ಸರಿ. ಜೊತೆಗೆ ಇವರು ಹಗ್ಗ ಒಸೆಯುವ, ಮಿಣಿ, ಕುಕ್ಕೆ, ಮುಖವಾಡ ಹಾಕುವ ಕೆಲಸಗಳನ್ನೂ ಮಾಡುತ್ತಿದ್ದರು.

ಇದೇ ಗ್ರಾಮದ ಮಡಿವಾಳ ಸಮುದಾಯದ ವೆಂಕಟಪ್ಪ (ಬಡ್ಡಣ್ಣ) ಮತ್ತು ಆತನ ಮಕ್ಕಳು 'ಚೇಳು' ಕಡಿದರೆ ಔಷಧಿ ನೀಡುತ್ತಿದ್ದರು. ಆದರೆ ಇಂದಿನ ವೈಜ್ಞಾನಿಕ ಆಸ್ಪತ್ರೆ ವ್ಯವಸ್ಥೆಯ ಕಾರಣವಾಗಿ ಅವರು ಇಂದು ಔಷಧಿ ತಯಾರು ಮಾಡಿ ಕೊಡುವ ಕ್ರಮವನ್ನು ನಿಲ್ಲಿಸಿದ್ದಾರೆ ಹಾಗೂ ಮರೆತಿದ್ದಾರೆ. ಕಾರಣ ಒಮ್ಮೆ ಮಾಡಿಟ್ಟ ಔಷಧಿ ಹೆಚ್ಚು ದಿನ ಇರುವುದಿಲ್ಲವೆಂಬುದು. ಹಾಗೂ ಮುಖ್ಯವಾಗಿ ಈ ಔಷಧಿಯನ್ನು ತಯಾರಿಸಲು ಅದು ಬೇಡುವ ಕೆಲವು ಕಟ್ಟು ನಿಟ್ಟಿನ ನಿಯಮಗಳು.

ಗ್ರಾಮದಲ್ಲಿ 'ಶ್ರೀ ಆದಿಶಕ್ತಿ ಕಾಳಿಕಾದೇವಿ ಹಾಗೂ ವಿನಾಯಕ ಯುವಕ ಸಂಘ (ರಿ.) ಇದ್ದು, ಹಲವು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲಾಗುತ್ತದೆ. ಈ ಸಂಘದ ಮುಖೇನ ಪ್ರತಿವರ್ಷ ಗಣೋತ್ಸವವನ್ನು

ಏರ್ಪಡಿಸಲಾಗುತ್ತಿದೆ. ಇತ್ತೀಚೆಗೆ 21 ವರ್ಷಗಳು ತುಂಬಿದ ಕಾರಣವಾಗಿ 21 ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಿ, ಪೂಜಿಸಿ, ವಿಜೃಂಭಣೆಯಿಂದ ವಿಸರ್ಜಿಸಲಾಯಿತು. ಒಂಭತ್ತು ದಿನಗಳವರೆಗೆ ನಡೆಸಲಾಗುವ ಗಣೇಶನ ಪೂಜಾ ಕಾರ್ಯದಲ್ಲಿ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ. ಗ್ರಾಮದ ಬೆಸ್ತ ಸಮುದಾಯದ ತಿಮ್ಮಣ್ಣನವರು ಪರಂದರದಾಸರ ಕೀರ್ತನೆಗಳನ್ನು ಹಾಡುತ್ತಿದ್ದುದು ಈ ಕಾರ್ಯಕ್ರಮದ ಮುಖ್ಯ ವಿಶೇಷವಾಗಿತ್ತು. ಆದರೆ ಅವರ ನಿಧನಕ್ಕೆ ಮುನ್ನ ಅವರು ಹಾಡುತ್ತಿದ್ದ ಹಾಡುಗಳನ್ನು ಸೂಕ್ತ ರೀತಿಯಲ್ಲಿ ಸಂಗ್ರಹಿಸಿ ದಾಖಲಿಸಲಾಗದ್ದು ನಷ್ಟವೇ ಸರಿ. ಇದಲ್ಲದೆ ಕೋಲಾಟದ ಕಲಾವಿದರಿದ್ದು, ಕೊರವಂಜಿ ಮೊದಲಾದ ಕೋಲಾಟದ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾರೆ.

ಗ್ರಾಮದವರು ನಾಟಕಾಭಿಮಾನಿಗಳೂ ಆಗಿದ್ದು, ಕುರುಕ್ಷೇತ್ರ ಮೊದಲಾದ ನಾಟಕಗಳನ್ನು ಅಭಿನಯಿಸುತ್ತಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದು ಇದು ರಾಜಕೀಯ ಹಳ್ಳಿಯನ್ನು ಪ್ರವೇಶಿಸುವುದಕ್ಕಿಂತ ಮುಂಚಿನ ಕಾಲಘಟ್ಟವಾಗಿದ್ದು, ಇಂದು ರಾಜಕೀಯ ಹಸ್ತಕ್ಷೇಪದಿಂದಾಗಿ ಪ್ರತಿ ಕೆಲಸಗಳಲ್ಲಿಯೂ ಗುಂಪುಗಳು ಏರ್ಪಟ್ಟು, ಗ್ರಾಮದಲ್ಲಿ ಮೊದಲಿದ್ದ ಸಾಮಾಜಿಕ ಬಾಂಧವ್ಯಗಳಾಗಲಿ, ಸಹೋದರತ್ವಗಳಾಗಲಿ ಉಳಿಯದೆ, ಹಳ್ಳಿ ಗುಂಪುಗಾರಿಕೆಯ ಕೇಂದ್ರವಾಗಿದೆ. ಇನ್ನು ಹಳ್ಳಿಯ ರಾಜಕೀಯ ಚಿತ್ರಣ ಮುಖ್ಯವಾಗಿ ಒಕ್ಕಲಿಗ ಹಾಗೂ ತಿಗಳ ಸಮುದಾಯದವರ ಹಿಡಿತದಲ್ಲಿದೆ. ಇದರ ನಡುವೆಯೂ ನಿಸ್ವಾರ್ಥ ಮನಸ್ಸುಗಳಿದ್ದಾಗ್ಯೂ ಹಳ್ಳಿ ಸಮರ್ಪಕವಾದ ರಸ್ತೆ, ಚರಂಡಿ, ಬೀದಿ ದೀಪ, ನೀರಿನ ಅನುಕೂಲತೆಗಳಿಲ್ಲದೆ ನಲುಗುತ್ತಿದೆ.

ಸಾಕ್ಷರತಾ ಪ್ರಮಾಣದಲ್ಲಿಯೂ ಅಷ್ಟೇನೂ ಹೇಳಿಕೊಳ್ಳುವಂತಹ ಸಾಧನೆ ಕಂಡುಬರುವುದಿಲ್ಲ. ಒಬ್ಬರು ಮಾತ್ರ ಪಿಎಚ್.ಡಿ ಯಂತಹ ಉನ್ನತ ವ್ಯಾಸಂಗವನ್ನು ಮಾಡುತ್ತಿರುವುದನ್ನು ಹೊರತುಪಡಿಸಿದರೆ, ಇಬ್ಬರು ಎಂ.ಎ, ನಾಲ್ವರು ಬಿ.ಇಡಿ, ಇಬ್ಬರು ಇಂಜಿನಿಯರಿಂಗ್ ಓದಿದವರಿದ್ದು, ಐವರು ಸರ್ಕಾರಿ ನೌಕರರಿದ್ದಾರೆ.

**ಉಪಸಂಹಾರ.**

ಒಂದು ಕಾಲದಲ್ಲಿ ಭಿನ್ನತೆ, ಪ್ರತ್ಯೇಕತೆಯೆ ಇಲ್ಲದಂತಿದ್ದ ಹಳ್ಳಿ ಇಂದು ಸಂಪೂರ್ಣ ಬದಲಾಗಿದೆ. ಕಾರಣ ರಾಜಕೀಯ, ಮತ್ತೊಂದು ಕುಡಿತ. ಪಟ್ಟಭದ್ರ ಹಿತಾಸಕ್ತಿಗಳ ಕಾರಣವಾಗಿ ಇರುವ ಸಾರಾಯಿ ಅಂಗಡಿ ಹಳ್ಳಿಗರ ದುಡಿಮೆಯ ಬಹುಪಾಲು ಆದಾಯವನ್ನು ನುಂಗಿ ನೀರು ಕುಡಿಯುತ್ತಿದೆ. ಅದನ್ನು ತಡೆಯಲು ಮಾಡಿದ ಪ್ರಯತ್ನಗಳು ವಿಫಲವಾಗಿವೆ. ಪಕ್ಕದಲ್ಲೆ ಶಾಲೆ, ಅಂಗನವಾಡಿ ಹಾಗೂ ದೇವಾಲಯಗಳಿದ್ದಾಗ್ಯೂ ಎಗ್ಗಿಲ್ಲದೆ ಸಾರಾಯಿ ಮಾರಾಟ ನಡೆದಿದೆ. ಯಾರೂ ಕೂಡ ಅದರ ಬಗ್ಗೆ ಚಕಾರವೆತ್ತದೆ ಜಾಣ ಕುರುಡು ಪ್ರದರ್ಶಿಸುತ್ತಿದ್ದರೆ, ಮತ್ತೊಂದು ಕಡೆ ರಾಜಕೀಯ ವಜ್ರ ಕವಚ ಇದಕ್ಕೆ ಶ್ರೀರಕ್ಷೆಯಾಗಿದೆ.

**ವಕ್ತಗಳ ವಿವರ**

| | ***ಹೆಸರು*** | ***ಜಾತಿ*** | ***ವಯಸ್ಸು*** | ***ಗ್ರಾಮ*** |
|---|---|---|---|---|
| 1. | ನಂಜಣ್ಣ | ಮಡಿವಾಳ | 55 | ಗೌರಿಪುರ |
| 2. | ಕೃಷ್ಣಪ್ಪ | ಒಕ್ಕಲಿಗ | 58 | ಗೌರಿಪುರ |
| 3. | ನಂಜಯ್ಯ | ಮಾದಿಗ | 67 | ಮಂಚಗೊಂಡನಹಳ್ಳಿ |
| 4. | ಕದರಯ್ಯ | ಮಾದಿಗ | 75 | ಮಂಚಗೊಂಡನಹಳ್ಳಿ |
| 5. | ಸಿದ್ದಗಂಗಮ್ಮ | ಒಕ್ಕಲಿಗ | 48 | ಗೌರಿಪುರ |
| 6. | ಪುಟ್ಟಣ್ಣ | ಒಕ್ಕಲಿಗ | 71 | ಗೌತಮಾರನಹಳ್ಳಿ |
| 7. | ಹನುಮಯ್ಯ | ತಿಗಳ | 65 | ಗೌರಿಪುರ |
| 8. | ದಿ|| ತಿಮ್ಮಣ್ಣ | ಬೆಸ್ತ | --- | ಗೌರಿಪುರ. |